ಶ್ರೀ ಯು. ಭೂಪತಿ.—ಬೆಂಬಲ ಬೆಲೆ

ಅಧ್ಯಕ್ಷರು.— ಈ ವಿಷಯ ಇಲ್ಲಿಗೇ ಮುಕ್ತಾಯವಾಯಿತು.

(ಗೊಂದಲ)

ಅಧ್ಯಕ್ಷರು. - ನಿಮ್ಮೆಲ್ಲರನ್ನು ಅವರ ಚೇಂಬರ್‌ಗೆ ಕರೆಸಿ ವಿೂಟಿಂಗ್ ಮಾಡಿ ಏನೇನು ಸಲಹೆಗಳನ್ನು ಕೊಟ್ಟಿದ್ದೀರಿ, ಅದರ ಜೊತೆಗೆ ಅಧಿಕಾರಿಗಳನ್ನು ಕೂಡ ಕರೆಸಿ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಲು ಪ್ರಯತ್ನ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದೇ ಒಂದು ನಿಮಿಷ ಸ್ವಾಮಿ.

ಅಧ್ಯಕ್ಷರು —ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ತಮ್ಮ ಚೇಂಬರ್‌ನಲ್ಲಿ ವಿೂಟಿಂಗ್ ಕರೆಸುತ್ತೇನೆ ಎಂದು ಅವರು ಹೇಳಿದ್ದಾರೆ. ನಿಮ್ಮನ್ನೂ ಕರೆಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್. ಇವರು ಇನ್ನೂ ಯುವಕರು, ಒಳ್ಳೆಯ ಮಂತ್ರಿಗಳು. ಅವರ ಅಭಿಪ್ರಾಯ ಒಳ್ಳೆಯದು, ಆದರೆ ಪ್ರಶ್ನೆ ಏನು ಎಂದರೆ ಒಂದು ಪಾತು ಅವರ ಬಾಯಿಂದ ಬರಬೇಕಾಗಿದೆ ಸರ್ಕಾರದ ಬೆಂಬಲ ಬೆಲೆಯ ನೀತಿಯನ್ನು ಅಂದರೆ ಎಂತಹ ವಸ್ತುಗಳ ಬಗ್ಗೆ ಬೆಂಬಲ ಬೆಲೆಯನ್ನು ಕೊಡುತ್ತಾರೆ ಎಂದು ಅವರು ಹೇಳಿಲ್ಲ.

೧೧-೦೦ ಎ. ಎಂ.

ಅಧ್ಯಕ್ಷರು, — ಮಾನ್ಯ ಕೃಷ್ಣನ್‌ರವರೇ, ಅದಕ್ಕೆ ಸಚಿವರು ವಿೂಟಿಂಗ್ ಕರೆಯುತ್ತೇನೆ ಅಂದರು

ಶ್ರೀ ಆರ್. ವೆಂಕಟರಾಮಯ್ಯ —ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ನಾಲ್ಕೂವರೆ ಕೋಟಿ ರೂಪಾಯಿಯನ್ನು ಅಲ್ಲಿನ ಹೆಗ್ಗಣಗಳು ತಿಂದಿವೆ. ಇದನ್ನು ಕಾರ್ಪೊರೇಷನ್‌ನವರು ಕೊಂಡು ಕೊಳ್ಳುವುದಕ್ಕೆ ಏನು ತೊಂದರೆ ಕನಿಷ್ಟ ಕೆ.ಜಿ.ಗೆ ೧ ರೂಪಾಯಿಗೆ ಟೊಮ್ಯಾಟೋ ಕೊಳ್ಳುತ್ತೇವೆಂದು ಹೇಳಿ. ದಯವಿಟ್ಟು, ಆ ಒಂದು ಧೈರ್ಯ ಕೊಡಿ. ಒಂದು ಕೋಟಿ ರೂಪಾಯಿ ನಷ್ಟವಾದರೂ ಪರವಾಯಿಲ್ಲ

ಶ್ರೀ ಸಿ. ಬೈರೇಗೌಡ.—ಸಭೆ ಕರೆಯುತ್ತೇನೆಂದು ಹೇಳಿದ್ದಾರೆ. ಬಹಳ ಸಂತೋಷ ಇನ್ ಪ್ರಿನ್ಸಿಪಲ್ ಆಗಿ ಇದನ್ನು ಸರ್ಕಾರದವರು ಒಪ್ಪಬೇಕು. ಬೆಂಬಲ ಕೊಡುವುದಕ್ಕೆ ನಾವೂ ಒಪ್ಪುತ್ತೇವೆ. ಇದರ ಬಗ್ಗೆ ಸಲಹೆ ಕೊಡೋಣ. ಆದರೆ ಏನೂ ಹೇಳದೇ ಸಭೆ ಕರೆಯುತ್ತೇನೆ ಅಂದರೆ, ಆಲ್ಲಿ ಟೀ ತಿಂಡಿ ಕೊಡಬಹುದು.....

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈಗಾಗಲೇ ಬೆಲೆ ನಿರ್ಧರಿಸುವುದಕ್ಕೆ ಶಂಕರಿಕೊಪ್ಪ ಸಮಿತಿ ಈಗಾಗಲೇ ಇದೆ. ಮಾನ್ಯ ಬೈರೇಗೌಡರು ಮಂತ್ರಿಗಳಾಗಿದ್ದವರು, ಅವರಿಗೆ ಈ ವಿಷಯ ಗೊತ್ತಿದೆ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಷ್ಟು ಭರವಸೆಯನ್ನು ತಾತ್ರ ಕೊಡುತ್ತೇನೆ. ಏನೆಂದರೆ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಏನು ಮಾಡುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ತಾವು ಸಲಹೆಗಳನ್ನು ಕೊಡಿ. ಕೆಲವು ಸಲಹೆಗಳು ನನ್ನ ವ್ಯಾಪ್ತಿಯಲ್ಲಿ ಬರಬಹುದು, ಮತ್ತೆ ಕೆಲವು ಸಲಹೆಗಳ, ಮಂತ್ರಿಮಂಡಲದ ವ್ಯಾಪ್ತಿಗೆ ಬರಬಹುದು. ಅದೇನೇ ಆಗಲಿ, ತಾವು ಈ ಬಗ್ಗೆ ಸಲಹೆಗಳನ್ನು ಕೊಡಿ. ನಾನು ಅವುಗಳನ್ನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು.—ಸಚಿವರು, ಅವರ ಚೇಂಬರಿನಲ್ಲಿಯೇ ಸಭೆ ಕರೆಯುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿಗೆ ಈ ವಿಷಯವನ್ನು ಮುಕ್ತಾಯ ಮಾಡುತ್ತೇನೆ.

(ಈ ಹಂತದಲ್ಲಿ ಸಿಪಿಐ ಮತ್ತು ಸಿಪಿಎಂ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು —ಅವರು ಹೊರ ಹೋದರೂ ಕೂಡ ನೀವು ಸಭೆಯನ್ನು ಕರೆಯಿರಿ, ಇಲ್ಲಿಯೇ ಇದ್ದರೂ ಸಭೆ ಕರೆಯಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಅವರು ಹೊರಗೆ ಹೋಗುತ್ತಾರೆ. ಆದರೆ ಷುಗರ್ ಕೇನ್ ರೇಟ್ ಬಗ್ಗೆ ಸರ್ಕಾರ ಹೈಪವರ್ ಕಮಿಟಿ ಮಾಡಿದೆ. ಅದರಂತೆ ಇದರ ಬಗ್ಗೆಯೂ ಒಂದು